# OCTOBER 10, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಅರಣ್ಯ ಒತ್ತುವರಿ ತೆರವು: ಮಾನವೀಯ ನೆಲೆಯಲ್ಲಿ ಕ್ರಮ – ಈಶ್ವರ ಖಂಡ್ರೆ.**
- **‘ಚಿಲಿಪಿಲಿ’ ಯೋಜನೆ: ಪೂರ್ವ ಪ್ರಾಥಮಿಕ ಹಂತದ, ಗಣಿತ ಕಲಿಕೆಗೆ ಸೃಜನಶೀಲ ಪಠ್ಯಕ್ರಮ – ಮಧು ಬಂಗಾರಪ್ಪ.**
- **ರಾಜ್ಯದ ಉಪ ವಿಭಾಗಾಧಿಕಾರಿ ನ್ಯಾಯಾಲಯಗಳ, 33 ಸಾವಿರದ 207 ಪ್ರಕರಣಗಳು ಇತ್ಯರ್ಥ – ಕೃಷ್ಣ ಬೈರೇಗೌಡ.**
- **ಮಾಲ್ಡೀವ್ಸ್ –ಭಾರತ ಮಧ್ಯದ, ಸೌಹಾರ್ದ ಸಂಬಂಧ ಬಲಗೊಂಡಿದೆ – ಥಾವರಚಂದ್ ಗೆಹ್ಲೋಟ್.**

<><><>

**ಈಗ ವಾರ್ತೆಗಳ ವಿವರ**

<><><>

**ಅರಣ್ಯ ಒತ್ತುವರಿ ವಿ ’ಯದಲ್ಲಿ, ವಸ್ತುಸ್ಥಿತಿ ಪರಿಶೀಲಿಸಿ, ಮಾನವೀಯ ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು, ಅಧಿಕಾರಿಗಳಿಗೆ ಸೂಚಿಸಿದ್ದಾಗಿ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆಯ, ದಾಂಡೇಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕೃಷಿಕರು, ಬುಡಕಟ್ಟು ಸಮುದಾಯದವರನ್ನು ಒಕ್ಕಲೆಬ್ಬಿಸದಂತೆ, ಅರಣ್ಯಾಧಿಕಾರಿಗಳಿಗೆ ನಿರ್ದೇಶಿಸಿದ್ದಾಗಿ, ಸಚಿವರು ಹೇಳಿದರು. ಹಾವು ಕಚ್ಚಿ ಸಾವನ್ನಪ್ಪಿದವರಿಗೆ, ಹೆಚ್ಚಿನ ಪರಿಹಾರ ನೀಡುವ ಕುರಿತಂತೆ ಉತ್ತರಕನ್ನಡ ಜಿಲ್ಲೆಯ ಜನಪ್ರತಿನಿಧಿಗಳ ಬೇಡಿಕೆ ಇದ್ದು, ಪರಿಶೀಲಿಸುವುದಾಗಿ ಭರವಸೆ ನೀಡಿದರು.**

<><><>

**ಕಾರವಾರ ಅರಣ್ಯ ವಿಭಾಗ, ‘ಆಲಿವ್ ರಿಡ್ಲೆ’ ಹಸಿರು ಕಡಲಾಮೆಗಳ, ರಕ್ಷಣೆ ಮತ್ತು ಪುನರ್ವಸತಿ ಕೇಂದ್ರವನ್ನು ಪ್ರಾರಂಭಿಸಿ, ಪ್ರವಾಸೋದ್ಯಮದ ಬಲವರ್ಧನೆಗೆ ಮುಂದಾಗಿದೆ. ಕಾರವಾರ ಬಳಿ ಕೋಡಿಬಾಗದ, ‘ಟ್ರೀ ಪಾರ್ಕ್’ನಲ್ಲಿ ಕಡಲಾಮೆಗಳ ಪುನರ್ವಸತಿ ಕೇಂದ್ರ ಸ್ಥಾಪಿಸಲು ನಿರ್ಧರಿಸಲಾಗಿದೆ. 4 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿದ್ದು, ವಿಶ್ವ ಬ್ಯಾಂಕ್ ಅನುದಾನ ನೀಡಲಿದೆ. ಕಡಲಾಮೆಗಳಿಗೆ ಸಂಬಂಧಿಸಿದ, ವ್ಯಾಖ್ಯಾನ ಕೇಂದ್ರ ಹಾಗೂ ಅಧ್ಯಯನ ಕೇಂದ್ರವನ್ನು, ರೂಪಿಸಲಾಗುತ್ತಿದೆ. ತಿಮಿಂಗಿಲಗಳು ಮತ್ತು ಇತರೆ ಪರ ಭಕ್ಷಕಗಳ ದಾಳಿಯಿಂದ ಗಾಯಗೊಂಡ ಆಮೆಗಳಿಗೆ, ಚಿಕಿತ್ಸೆ ನೀಡುವ ಪಶುವೈದ್ಯರನ್ನು ಸಹ ನಿಯೋಜಿಸಿ, ಆರೈಕೆ ಬಳಿಕ, ಪುನರ್ವಸತಿ ಕಲ್ಪಿಸಲು ಯೋಜಿಸಲಾಗಿದೆ.**

<><><>

ಕೊಡಗು ಜಿಲ್ಲೆ, ವಿರಾಜಪೇಟೆಯ ವೈದ್ಯ ಡಾಕ್ಟರ್ ಎಸ್.ವಿ ನರಸಿಂಹನ್, ಕಳೆದ **41** ವರ್ಷಗಳಿಂದ, ರಾಷ್ಟ್ರೀಯ ವನ್ಯಜೀವಿ ಸಪ್ತಾಹದ ಸಂದರ್ಭದಲ್ಲಿ, ತಾವೇ ರಚಿಸಿದ, ಪ್ರಾಣಿ ಹಾಗೂ ಪಕ್ಷಿಗಳ ಸುಂದರ ಚಿತ್ರಗಳ ಸಂದೇಶ ಪತ್ರಗಳನ್ನು ಸಹೃದಯಿಗಳಿಗೆ ಕಳುಹಿಸುತ್ತಿದ್ದಾರೆ. ಈ ಬಾರಿಯ, **70**ನೇ ವನ್ಯಜೀವಿ ಸಪ್ತಾಹದಲ್ಲಿ, 'ಪ್ರೀತಿ ಇಲ್ಲದ ಹೊರತು ಪ್ರಕೃತಿ ಸಂರಕ್ಷಣೆ ಅಸಾಧ್ಯ' ಎನ್ನುವ ಚಿತ್ರದೊಂದಿಗೆ, ಜೌಗು ಹಕ್ಕಿಯ ಚಿತ್ರ ಹಾಗೂ ಮತ್ತೊಂದು ಪತ್ರದಲ್ಲಿ, ನವಿಲುಗರಿಯ ಚಿತ್ರದೊಂದಿಗೆ, 'ಪ್ರಕೃತಿ ಸವಿಯಲು ಸಾಕು ಎರಡು ಕಣ್ಣಳು; ಉಳಿಸಲು ಬೇಕು ಸಾವಿರ ಕೈಗಳು' ಎಂಬ ಸಂದೇಶ ಹೊತ್ತ, ಪತ್ರಗಳನ್ನು ನರಸಿಂಹನ್ ಸಿದ್ಧ ಪಡಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಹವ್ಯಾಸದ ಕುರಿತು ಹಂಚಿಕೊಂಡಿದ್ದಾರೆ.

<><><>

ಡಾಕ್ಟರ್ ಎಸ್.ವಿ. ನರಸಿಂಹನ್ ಧ್ವನಿ **45** ಸೆಕೆಂದುಗಳು

<><><>

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ, ಜಂಬೂ ಸವಾರಿ ನಾಡಿದ್ದು ನಡೆಯಲಿದ್ದು, ಅಂಬಾವಿಲಾಸ ಅರಮನೆ ಆವರಣದಲ್ಲಿ, ಆನೆಗಳಿಗೆ ಮೊದಲ ಹಂತದ ತಾಲೀಮು ನಡೆಸಲಾಯಿತು. ನಿಶಾನೆ ಆನೆಯಾಗಿ ಧನಂಜಯ, ನೌಪತ್ ಆನೆಯಾಗಿ ಗೋಪಿ, ಚಿನ್ನದ ಅಂಬಾರಿ ಹೊತ್ತು ಸಾಗಲಿರುವ ಅಭಿಮನ್ಯು ಆನೆಯೊಂದಿಗೆ, ಕುಮ್ಕಿ ಆನೆಗಳು ಭಾಗವಹಿಸಿದ್ದವು. ಇಂದು ಬೆಳಗ್ಗೆ ಎರಡನೇ ಹಂತದ ತಾಲೀಮು ನಡೆಯಲಿದೆ. ಹಿರಿಯ ಅರಣ್ಯಧಿಕಾರಿ ಪ್ರಭು ಗೌಡ, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಪ್ರಭು ಗೌಡ ಧ್ವನಿ **26** ಸೆಕೆಂದುಗಳು

<><><>

ಮೈಸೂರು ದಸರಾದ 7ನೇ ದಿನವಾದ ನಿನ್ನೆ, ಯೋಗ ದಸರಾ ಉಪ ಸಮಿತಿ ವತಿಯಿಂದ, ಚಾಮುಂಡಿ ಬೆಟ್ಟದ ತಪ್ಪಲು ಮತ್ತು ದೇವಸ್ಥಾನದ ಆವರಣದಲ್ಲಿ, 'ಯೋಗ ಚಾರಣ ಮತ್ತು ದುರ್ಗಾ ನಮಸ್ಕಾರ' ಕಾರ್ಯಕ್ರಮ ನಡೆಯಿತು.'ಯೋಗ' ಅಧಿಕಾರೇತರ ಉಪ ಸಮಿತಿಯ ಅಧ್ಯಕ್ಷ, ಎಂ.ಮಹೇಶ ಸಮಾರಂಭವನ್ನು ಉದ್ಘಾಟಿಸಿದರು. **250**ಕ್ಕೂ ಹೆಚ್ಚು ಯೋಗಪಟುಗಳು ಚಾರಣದಲ್ಲಿ ಭಾಗವಹಿಸಿದ್ದರು. ಯೋಗದ ವಿವಿಧ ಭಂಗಿಗಳನ್ನು ಪ್ರದರ್ಶಿಸಿದರು.

<><><>

ಮೈಸೂರಿನ ಉತ್ತನಹಳ್ಳಿಯಲ್ಲಿ ಆಯೋಜಿಸಿದ್ದ, ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಅವರ ಕಂಠಸಿರಿಯ ಸಂಗೀತ ಕಾರ್ಯಕ್ರಮದಲ್ಲಿ, ಲಕ್ಷಾಂತರ ಜನ ಪಾಲ್ಗೊಂಡರು. ಹಿನ್ನೆಲೆ ಗಾಯಕರಾದ ಶ್ವೇತಾ ಮೋಹನ್, ವಿಜಯ ಪ್ರಕಾಶ ಕಾರ್ಯಕ್ರಮದ ಮೆರಗು ಹೆಚ್ಚಿಸಿದರು.

<><><>

ಈಗ ಪ್ರಕಟಣೆ..
(**42** ಸೆಕೆಂದುಗಳು)
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ಆರಂಭಿಸಲಾದ, ಎಲ್.ಕೆ.ಜಿ., ಯು.ಕೆ.ಜಿ. ತರಗತಿ ಮಕ್ಕಳಿಗೆ, 'ಚಿಲಿಪಿಲಿ' ಯೋಜನೆಯಡಿ, ಗಣಿತ ಸೇರದಂತೆ ಸೃಜನಶೀಲ ಕಲಿಕೆಗೆ, ಪಠ್ಯಕ್ರಮ ರೂಪಿಸಲಾಗುವುದು ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಈ ವಿಷಯ ತಿಳಿಸಿದ ಸಚಿವರು, 'ಗಣಿತ–ಗಣಕ' ಕಾರ್ಯಕ್ರಮದಡಿ ತರಬೇತಿ ಪಡೆದ ಶಿಕ್ಷಕರು, 3 ರಿಂದ 5ನೇ ತರಗತಿ ವಿದ್ಯಾರ್ಥಿಗಳ ಫೋ 'ಕರ ಮೊಬೈಲ್‌ಗೆ ಕರೆ ಮಾಡಿ, ಪ್ರತಿ ದಿನ 45 ನಿಮಿ 'ಗಳ ವರೆಗೂ ಗಣಿತ ಹೇಳಿ ಕೊಡಲಿದ್ದಾರೆ. 'ಮರು ಸಿಂಚನ' ಕಾರ್ಯಕ್ರಮದಡಿ, 7 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಹಿಂದಿನ ತರಗತಿಯಲ್ಲಿನ ಪಾಠಗಳನ್ನು ಪುನರ್ ಮನನ ಮಾಡಿಕೊಡಲಾಗುವುದು ಎಂದರು.

<><><>

ರಾಜ್ಯದ ಎಲ್ಲ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಬಾಕಿ ಇದ್ದ, 33 ಸಾವಿರದ 207 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ಎಂದು, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ವಿಕಾಸಸೌಧದಲ್ಲಿ ವಿಡಿಯೋ ಸಂವಾದದ ಮೂಲಕ, ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು. ತಕರಾರು ಪ್ರಕರಣಗಳನ್ನು ಇತ್ಯರ್ಥಗೊಳಿಸಿ, ರೈತರಿಗೆ ಶೀಘ್ರ ನ್ಯಾಯ ಒದಗಿಸುವ ಸಲುವಾಗಿ, ತುಮಕೂರು, ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕುಂದಾಪುರ ಸೇರಿ, 11 ಜಿಲ್ಲೆಗಳಲ್ಲಿ 20ಕ್ಕೂ ಅಧಿಕ ವಿಶೇಷ ನ್ಯಾಯಾಲಯಗಳಿಗೆ ಚಾಲನೆ ನೀಡಲಾಗಿದೆ. ಬಾಕಿ ಪ್ರಕರಣಗಳ ತ್ವರಿತ ವಿಲೇವಾರಿಗೂ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಿದ್ದಾಗಿ, ಸಚಿವ ಕೃಷ್ಣ ಬೈರೇಗೌಡ ಹೇಳಿದರು.

<><><>

ಮಾಲ್ಡೀವ್ಸ್ ಅಧ್ಯಕ ಮೊಹಮ್ಮದ್ ಮುಯಿಜ್ಜು ಮತ್ತು ಪ್ರಥಮ ಮಹಿಳೆ ಸಾಜಿದಾ ಮೊಹಮ್ಮದ್ ಅವರ, ಸೌಜನ್ಯದ ಭೇಟಿ ಮತ್ತು ಮಹತ್ವದ ಸಭೆಗಳು, ದ್ವಿ ಪಕ್ಷೀಯ ಸಂಬಂಧ ಮತ್ತು ಎರಡು ದೇಶಗಳ ಮಧ್ಯದ ಸೌಹಾರ್ದ ಸಂಬಂಧವನ್ನು, ಬಲಪಡಿಸಿದೆ ಎಂದು, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹೇಳಿದ್ದಾರೆ. ಭಾರತದ ಪ್ರವಾಸದಲ್ಲಿರುವ ಮಾಲ್ಡೀವ್ಸ್ ಅಧ್ಯಕ್ಷರು, ಬೆಂಗಳೂರಿಗೆ ಆಗಮಿಸಿದ್ದು, ರಾಜ ಭವನಕ್ಕೆ ಭೇಟಿ ನೀಡಿದರು. ರಾಜ್ಯಪಾಲರು ಆತ್ಮೀಯವಾಗಿ ಸ್ವಾಗತಿಸಿ, ಗೌರವಿಸಿದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, ಮಾಲ್ಡೀವ್ಸ್ ಅಡ್ಡುವಿನಲ್ಲಿ ಭಾರತೀಯ ದೂತಾವಾಸ ಮತ್ತು ಬೆಂಗಳೂರಿನಲ್ಲಿ ಮಾಲ್ಡೀವ್ಸ್ ರಾಯಬಾರಿ ಕಚೇರಿ ತೆರೆಯುವ ಬಗ್ಗೆ ಚರ್ಚೆ ನಡೆದಿದೆ. ರೂಪೇ ಕಾರ್ಡ್ ಮಾಲ್ಡೀವ್ಸ್‌ನಲ್ಲಿ ಚಲಾವಣೆಯಲ್ಲಿರುವುದು, ಸಂತಸದ ವಿಷಯ ಎಂದರು.

<><><>

ದೇಶದ ಹೆಮ್ಮೆಯ ಉದ್ಯಮಿ, ಟಾಟಾ ಸಮೂಹದ ಮುಖ್ಯಸ್ಥರಾದ, ರತನ್ ಟಾಟಾ, ಮುಂಬೈಯ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ನಿನ್ನೆ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು. ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದು, ರತನ್ ಟಾಟಾ ಅವರು ತಮ್ಮ ಬದುಕು ಮತ್ತು ಸಾಧನೆಗಳ ಮೂಲಕ ಅಜರಾಮರ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುವುದಾಗಿ, ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

<><><>

ರಾಜ್ಯ ಮಟ್ಟದ ಚದುರಂಗ ಸ್ಪರ್ಧೆಯ, 17 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ, ಕಲಬುರಗಿಯ ಶ್ರೇಯಸ್ ಸಡ್ಡು 8 ಅಂಕಗಳೊಂದಿಗೆ ಪ್ರಥಮ ಸ್ಥಾನ ಹಾಗೂ ಬಾಲಕಿಯರ ವಿಭಾಗದಲ್ಲಿ ಕಾರವಾರದ ಸಿಂಚನಾ ಭಟ್, ಶಿವಮೊಗ್ಗದ ಪವನಿ

ಆರ್. ಕ್ರಮವಾಗಿ 8 ಅಂಕಗಳೊಂದಿಗೆ ಪ್ರಥಮ ಮತ್ತು ದ್ವಿತೀಯ ಸ್ಥಾನಗಳನ್ನು ಹಂಚಿಕೊಂಡಿದ್ದಾರೆ ಎಂದು ಮುಖ್ಯ ನಿರ್ಣಾಯಕ ಮಂಜುನಾಥ ಎಂ. ತಿಳಿಸಿದ್ದಾರೆ. ಪ್ರೌಢ ಶಾಲಾ ವಿದ್ಯಾರ್ಥಿಗಳ ರಾಜ್ಯ ಮಟ್ಟದ ಚದುರಂಗ ಸ್ಪರ್ಧೆ, ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲೂಕು ಚಳಗೇರಿಯ, ಕೆನರಾ ಇ–ವಿಶನ್ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿತವಾಗಿತ್ತು. ಐವರು ಬಾಲಕರು, ಐವರು ಬಾಲಕಿಯರು ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.

<><><>

ಲಕ್ಷದ್ವೀಪಗಳು ಹಾಗೂ ಅರಬ್ಬೀ ಸಮುದ್ರದಲ್ಲಿ, ವಾಯುಭಾರ ಕುಸಿತದಿಂದಾಗಿ ಮುಂದಿನ ಮೂರ್‍ನಾಲ್ಕು ದಿನ ಉತ್ತರಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ, ಭಾರೀ ಮಳೆಯ ಮುನ್ಸೂಚನೆ ನೀಡಲಾಗಿದೆ. ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಬಳ್ಳಾರಿ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಇಂದು ಗುಡುಗು ಸಹಿತ ಮಳೆ ನಿರೀಕ್ಷಿತ. ದಕ್ಷಿಣಕನ್ನಡ, ಗದಗ, ಕೊಪ್ಪಳ, ಧಾರವಾಡ, ಹಾವೇರಿ ಜಿಲ್ಲೆಗಳಲ್ಲೂ ಇಂದು ಮಳೆಯಾಗಲಿದೆ ಎಂದು, ಹವಾಮಾನ ಇಲಾಖೆ ತಿಳಿಸಿದೆ.

<><><>

ಶರನ್ನವರಾತ್ರಿಯ 8ನೇ ದಿನವಾದ ಇಂದು, ದುರ್ಗಾಷ್ಟಮಿ. ಧಾರವಾಡದ ರವಿವಾರ ಪೇಟೆಯ, ಶ್ರೀ ಲಕ್ಷ್ಮೀ ನಾರಾಯಣ ದೇಗುಲದಲ್ಲಿ ಇಂದು, ಶರವಿದ್ಯಾ ವೇಶ ತೊಡಿಸಿ, ಪೂಜಿಸಲಾಗಿದೆ. ಧಾರವಾಡದ ಶಾಂತಿನಿಕೇತನ ನಗರದ, ಶ್ರೀ ಕರಿಯಮ್ಮ ದೇವಿ ದೇವಸ್ಥಾನದಲ್ಲಿ, ಶ್ರೀ ಶಾಖಾಂಬರಿ ದೇವಿ ಅವತಾರ ತೊಡಿಸಿ, ಪೂಜಾ ಕೈಂಕರ್ಯ ನಡೆಸಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ವಿಶ್ವ ಆರೋಗ್ಯ ಸಂಸ್ಥೆ, ಅಕ್ಟೋಬರ್ ತಿಂಗಳ ಎರಡನೇ ಗುರುವಾರವನ್ನು, ವಿಶ್ವ ಮಕ್ಕಳ ದೃಷ್ಟಿ ರಕ್ಷಣೆ ದಿನವಾಗಿ ಘೋಷಿಸಿದೆ. ದೃಷ್ಟಿದೋಷದಿಂದ ಎಲ್ಲ ಮಕ್ಕಳನ್ನು ಮುಕ್ತಿಗಾಣಿಸುವುದು, ಈ ದಿನಾಚರಣೆ ಧ್ಯೇಯ.

<><><>

"ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವ ಸಮಯ ಇದು" ಎಂಬ ಧ್ಯೇಯದೊಂದಿಗೆ "ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ" ಇಂದು ಬೆಳಗ್ಗೆ 11.30ಕ್ಕೆ, ಕಲಬುರಗಿಯ ಪಿ.ಡಿ.ಎ. ಇಂಜನಿಯರಿಂಗ್ ಕಾಲೇಜಿನಲ್ಲಿ, ಆಯೋಜಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಅರಣ್ಯ ಒತ್ತುವರಿ ತೆರವು; ಮಾನವೀಯ ನೆಲೆಯಲ್ಲಿ ಕ್ರಮ – ಈಶ್ವರ ಖಂಡ್ರೆ.
- 'ಚಿಲಿಪಿಲಿ' ಯೋಜನೆ; ಪೂರ್ವ ಪ್ರಾಥಮಿಕ ಹಂತದ, ಗಣಿತ ಕಲಿಕೆಗೆ ಸೃಜನಶೀಲ ಪಠ್ಯಕ್ರಮ – ಮಧು ಬಂಗಾರಪ್ಪ.
- ರಾಜ್ಯದ ಉಪ ವಿಭಾಗಾಧಿಕಾರಿ ನ್ಯಾಯಾಲಯಗಳ, 33 ಸಾವಿರದ 207 ಪ್ರಕರಣಗಳು ಇತ್ಯರ್ಥ – ಕೃಷ್ಣ ಬೈರೇಗೌಡ.
- ಮಾಲ್ಡೀವ್ಸ್ – ಭಾರತ ಮಧ್ಯದ, ಸೌಹಾರ್ದ ಸಂಬಂಧ ಬಲಗೊಂಡಿದೆ – ಥಾವರಚಂದ್ ಗೆಹ್ಲೋಟ್.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>